## ಸೂಕ್ತಿಪ್ರಭ

ಸದಾ ವಿವೇಚಿಸುತ್ತಿರು, ಯಾವಗಲಾದರೂ ಮನಸ್ಸು ದೇವರನ್ನುಳಿದು ಇತರ ವಸ್ತುಗಳೆಡೆಗೆ ಹರಿದಾಗ ಅವುಗಳನ್ನು ತುಚ್ಛವೆಂದು ತಿಳಿ, ಮತ್ತು ಮನಸ್ಸನ್ನು ಭಗವಂತನ ಪಾದಪದ್ಮದಲ್ಲಿ ಶರಣಾಗಿಸು.

❊❊

ಮಗು, ಈ ಮನಸ್ಸು ಮದವೇರಿದ ಆನೆಯಂತೆ, ಇದು ಗಾಳಿಯಷ್ಟೆ ಚಂಚಲ. ಆದ್ದರಿಂದ ಸದಾ ವಿವೇಚನಾಪರನಾಗಿರಬೇಕು. ಭಗವಂತನ ಸಾಕ್ಷಾತ್ಕಾರಕ್ಕಾಗಿ ಸರ್ವಪ್ರಯತ್ನ ಮಾಡಬೇಕು.

❊❊

ನಿನ್ನ ಗುರು ಮತ್ತು ಇಷ್ಟದೇವತೆಯಲ್ಲಿ ಅಚಲ ಶ್ರದ್ಧೆ ಇಡು. ಅಧ್ಯಾತ್ಮ ಜೀವನದಲ್ಲಿ ಎಷ್ಟು ಮುಂದುವರಿದಿದ್ದೇನೆ ಎಂದು ಲೆಕ್ಕ ಹಾಕಲು ಹೋಗಬೇಡ, ಅದರಿಂದ ಅಹಂಕಾರ ಬರುತ್ತದೆ.

❊❊

ಸಾಧಕರು ತಮ್ಮ ನಡೆನುಡಿಗಳಲ್ಲಿ ಪ್ರಾಮಾಣಿಕರಿರಬೇಕು. ಸಾಧನೆ ಸಣ್ಣ ವಯಸ್ಸಿನಲ್ಲಿ ಪ್ರಾರಂಭಿಸಬೇಕು, ವಯಸ್ಸಾದಂತೆ ಶರೀರದ ಶಕ್ತಿ ಕ್ಷೀಣಿಸುವುದು. ಬೇಸರ ಎನಿಸಿದರೂ ಧ್ಯಾನ, ಜಪ ಬಿಡದೆ ಮಾಡಬೇಕು.

❊❊

ಮಾತಿನಿಂದ ಇತರರನ್ನು ನೋಯಿಸಕೂಡದು. ಸತ್ಯವಾದರೂ ಅಪ್ರಿಯವಾದುದನ್ನು ಅನಾವಶ್ಯಕವಾಗಿ ನುಡಿಯಬಾರದು. ಮತ್ತೊಬ್ಬರ ತಪ್ಪು ಎತ್ತಿ ಆಡಬಾರದು, ಕ್ಷಮೆಯೇ ತಪಸ್ಸು.

❊❊

ಗುರುವಿನ ಅನುಗ್ರಹವಿಲ್ಲದೆ ಮೋಹದ ತೆರೆ ಹರಿಯದು, ಸರಳತೆಯಿಲ್ಲದೆ ಗುರುವಿನ ಅನುಗ್ರಹ ಲಭಿಸದು. ಆದುದರಿಂದ ಸರಳತೆಯನ್ನು ಅಭ್ಯಾಸ ಮಾಡು.

❊❊

ಕಷ್ಟಗಳನ್ನು ಪರಮಾತ್ಮನ ಕರುಣೆಯ ಕುರುಹೆಂದು ತಿಳಿ. ಸುಖಕ್ಕೆ ಮನಸೋಲದೆ, ಕೆಚ್ಚಿನಿಂದ ಸಾಧನೆ ಮಾಡು.

❊❊

ದೇವರನ್ನು ಸಾಕ್ಷಾತ್ಕರಿಸಿಕೊಂಡವನು ನಿತ್ಯಾ ನಿತ್ಯವಸ್ತು ವಿವೇಕಸಂಪನ್ನನಾಗಿ, ದಿವ್ಯತೆಯನ್ನು ಅರಿತು ಹುಟ್ಟುಸಾವುಗಳನ್ನು ಮೀರಿ ನಿಲ್ಲುತ್ತಾನೆ

❊❊

ಶ್ರೀಮಾತೆ ಶ್ರೀಶಾರದಾದೇವಿ

# ಪ್ರಾರ್ಥನೆ

*ಸ್ವಾಮಿ ಹರ್ಷಾನಂದ ವಿರಚಿತ ಶ್ರೀಶಾರದಾಸ್ತುತಿಸಪ್ತಕದಿಂದ*

ಯಾ ಲೀಲಾಸಹಚಾರಿಣೀ ನರಗುರೋಃ ಶ್ರೀರಾಮಕೃಷ್ಣಸ್ಯ ಯಾ
ವಿಶ್ವೇಷಾಂ ಚ ದಿವೌಕಸಾಂ ಪ್ರಣಮತಾಮ್ ಇಷ್ಟಾರ್ಥಸಿದ್ಧಿಪ್ರದಾಃ |
ಯಾಮಾರಾಧ್ಯ ಹಿ ಸರ್ವಯೋಗಿಮುನಯಃ ಪ್ರಾಪ್ತಾ ವಿಮುಕ್ತಿಂ ಸ್ಥಿರಾಂ
ತಾಮಾಂಬಾಂ ನ ಉಪಾಸ್ಮಹೇ ತ್ರಿಜಗತಾಮ್ ಏಕಾಶ್ರಯಂ ಶಾರದಾಮ್ ||

ಯಾರು ಲೋಕಗುರುವಾದ ಶ್ರೀರಾಮಕೃಷ್ಣರ ಲೀಲೆಗೆ ಸಹಕಾರಿಣಿಯಾಗಿ ಅವತರಿಸಿದಳೋ ಯಾರು ಸಮಸ್ಕರಿಸುತ್ತಿರುವ ಸಕಲ ದೇವತೆಗಳಿಗೂ ಅವರವರ ಇಷ್ಟಾರ್ಥಗಳನ್ನು ಸಲ್ಲಿಸುವಳೋ ಯಾರನ್ನು ಪೂಜಿಸಿ ಎಲ್ಲಯೋಗಿಗಳೂ ಮುನಿಗಳೂ ಶಾಶ್ವತ ಮುಕ್ತಿಯನ್ನು ಪಡೆದರೋ ಅಂಥ ಮೂರುಲೋಕಗಳಿಗೂ ಏಕಮಾತ್ರ ಆಶ್ರಯಳಾದ ಶಾರದಾಮಾತೆಯನ್ನು ಉಪಾಸಿಸುತ್ತೇವೆ.

ಭವಾಗ್ನೌ ಸಂದಗ್ಧ್ಯೈಃ ದುರಿತನಿಹತ್ಯೈಃ ದುಃಖಭರಿತ್ಯೈಃ
ಹರೇಃ ಹೃತ್ಪದ್ಮಂ ಯದ್ಧ್ಯಹಹ ಮುಕುಲೀಭೂತಸುದಲಮ್ |
ಧ್ರುವಂ ತತ್ಪೀಡಾಯಾಸ್ತ್ರಿದಿವಮಧುಗಂಗೇವ ಗಲಿತಾ
ದಯಾ ಯಾ ಮಾತಾ ಭೂದವತು ದಯಯಾ ಮಾಂ ಜಯತು ಸಾ||

ಸಂಸಾರಾಗ್ನಿಯಲ್ಲಿ ಬೆಂದು ಕಷ್ಟಗಳಿಂದ ಹೊಡೆಯಲ್ಪಟ್ಟು ದುಃಖಿಗೊಂಡವರನ್ನು ನೋಡಿ ಶ್ರೀಹರಿಯ ಹೃದಯಕಮಲವು ಅಯ್ಯೋ ಎಂದು ಮುಚ್ಚಿಕೊಂಡಿತಂತೆ. ಅದರ ಹಿಂಡುವಿಕೆಯಿಂದಾಗಿ ಜೇನಿನಂತೆ ಸಿಹಿಯಾದ ಮತ್ತು ಸ್ವರ್ಗಲೋಕದ ಗಂಗೆಯಂತೆ ಪವಿತ್ರವಾದ ಶ್ರೀಹರಿಯ ದಯೆಯೇ ಕೆಳಗಿಳಿದುಬಂದು ಶ್ರೀಶಾರದಾಮಾತೆಯಾಯಿತು. ಅಂಥ ಶ್ರೀಮಾತೆಯು ನನ್ನನ್ನು ಕರುಣೆಯಿಂದ ಕಾಪಾಡಲಿ. ಆಕೆಗೆ ಜಯವಾಗಲಿ.

ಸರ್ವವೇದಶಾಸ್ತ್ರಶಿಲ್ಪಸಾರಬೋಧದಾಯಿನೀಂ
ಶರ್ವಧಾತೃವಿಷ್ಣುರೂಪಸರ್ವದೇವವಿಗ್ರಹಾಮ್ |
ಸರ್ವಲೋಕಸರ್ವಜೀವಸರ್ವಭೂತಧಾರಿಣೀಂ
ಸರ್ವತಾಪಹಾರಿಣೀಂ ಸದಾ ನಮಾಮಿ ಶಾರದಾಮ್ ||

ಎಲ್ಲವೇದಗಳ ಶಾಸ್ತ್ರಗಳ ಮತ್ತು ಶಿಲ್ಪಗಳ ಜ್ಞಾನಸಾರವನ್ನು ಕೊಡುವ, ಶಿವ,ಬ್ರಹ್ಮ, ವಿಷ್ಣು ಮೊದಲಾದ ಎಲ್ಲ ದೇವತೆಗಳ ಸ್ವರೂಪವಾದ, ಸಕಲ ಲೋಕಗಳ ಜೀವಗಳ ಮತ್ತು ಭೂತಗಳ ಆಧಾರವಾದ ಮತ್ತು ಸರ್ವತಾಪಗಳನ್ನೂ ಹೋಗಲಾಡಿಸುವ ಶಾರದೆಯನ್ನು ಸದಾ ನಮಸ್ಕರಿಸುತ್ತೇನೆ.

ಮಾತಾ ಮೇ ಪರಮಾ ಶಕ್ತಿಃ ಶಾರದೇತಿ ಪ್ರಥಾಂ ಗತಾ |
ಸ್ಥಿತೇ ಚೈವಂ ಜನೇರ್ಮೃತ್ಯೋಃ ಸಂಕಷ್ಟಾತ್ ಮೇ ಭಯಂ ಕುತಃ ||

ಶಾರದೆಯೆಂದು ಪ್ರಸಿದ್ಧಳಾದ ಪರಾಶಕ್ತಿಯು ನನ್ನ ಮಾತೆಯಾಗಿರಲು ಜನನಮರಣಗಳ ಕಷ್ಟದಿಂದ ಭಯವು ನನಗೆ ಎಲ್ಲಿಂದ ತಾನೆ ಬಂದೀತು?